GRANT OF LAND IN THE THYARAMBALLY TANK IN KOLLEGAL TALUK TO THE LANDLESS HARIJANS.

*Q—180. Smt. KEMPAMMA (Kollegal).—

Will the Government be pleased to state :—

(*a*) whether it is a fact that Thyarambally tank in Kollegal taluk is entirely silted up and not capable of storing water ;

(*b*) if so, whether they would grant the land in the tank bed for cultivation for landless Harijans ;

(*c*) the acreage of the above tank bed and the number of persons that could be provided with land there ?

A.—Sri KADIDAL MANJAPPA (Minister for Revenue).—

(*a*) The tank has silted up. Its present capacity is 31.38 units.

(*b*) No.

(*c*) The tank bed area is 124 acres. There is no question of disposing off the tank bed for cultivation since the tank sustains an atchkat of 214 acres.

ಶ್ರೀಮತಿ ಕೆಂಪಮ್ಮ.—ಈ ಕೆರೆಯಲ್ಲಿ ಹೂಳುತುಂಬಿದೆ ಎಂಬುದನ್ನು ಒಪ್ಪಿದ್ದೀರಿ. ಹಾಗಾದರೆ ಈ ಹೂಳನ್ನು ತೆಗೆಸುವುದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

†ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ವೆಂಕಟೇಗಾಡ.—ಹೂಳು ತೆಗೆಸದೆ ಕೆರೆಯಲ್ಲಿ ನೀರು ನಿಲ್ಲುವಂತಿಲ್ಲ ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಇದನ್ನು ಹೇಳಬೇಕಾಗಿಲ್ಲ.

ಶ್ರೀ ಎಂ. ರಾಮಪ್ಪ.—ಕೆರೆಗಳಲ್ಲಿಯ ಹೂಳನ್ನು ತೆಗೆಸಬೇಕೆಂದು ಸರಕಾರ ಈಗಾಗಲೆ ಒಂದು ತೀರ್ಮಾನ ತೆಗೆದು ಕೊಂಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀಮತಿ ಕೆಂಪಮ್ಮ.—ಈಗ ಈ ಕೆರೆಯ ಕೆಳಗೆ ಎಷ್ಟು ಎಕರೆ ತರಿ ಫನಲು ಮಾಡುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮಲ್ಲಿಯ ವರದಿ ಪ್ರಕಾರ ಅಚ್ಚುಕಟ್ಟು ಎಷ್ಟು ಅಂದರೆ 114 ಎಕರೆ ತರಿ ಫನಲು ಆಗುತ್ತಿದೆ.

ಶ್ರೀ ಬಿ. ರಾಚಯ್ಯ.—ಉತ್ತರದಲ್ಲಿ 214 ಎಕರೆಗಳ ಜಮೀನಿಗೆ ಆನರೆಯಾಗಿದೆ ಎಂದು ಹೇಳಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದರ ಸೀಪೇಜವಾಟರ್‌ದಿಂದ ಒಟ್ಟು 214 ಎಕರೆ ಜಮೀನು ಸಾಗುವಳಿ ಯಾಗುತ್ತಿದೆ. ಈಗ ಕೆರೆಯು ಸಿಲ್ಟಅಪ್ ಆಗಿದ್ದರೂ ಕೂಡ 31 ಯುನಿಟ್ ಅಷ್ಟು ನೀರು ಕೆರೆಯಲ್ಲಿ ಇರುವುದರಿಂದ ಸೀಪೇಜವಾಟರ್ ಬರುತ್ತದೆ. ಆದ್ದರಿಂದ 214 ಎಕರೆ ಸಾಗುವಳಿಗೆ ಸಾಕಷ್ಟು ನೀರು ದೊರೆಯುತ್ತದೆಂದು ವರದಿ ಬಂದಿದೆ.